# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

1 ರಿಂದ 4ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು: 560 001.
ಕಛೇರಿ ದೂ: 22392203, ಫ್ಯಾಕ್ಸ್: 22392206/07, ಮೇಲ್: kshrc2007@gmail.com

ಸಂಖ್ಯೆ:ಮಾ.ಹ.ಆ. 4451/10/10/2019 (B3)

ದಿನಾಂಕ: ~~07~~.07.2020
23

ಇಂದ:
ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:
ಆಯುಕ್ತರು,
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ.

ಮಾನ್ಯರೆ,

ವಿಷಯ: ಹೆಚ್‌ಆರ್‌ಸಿ ಸಂಖ್ಯೆ: 4451/10/10/2019 ರ ಪ್ರಕರಣದ ಬಗ್ಗೆ.

ಉಲ್ಲೇಖ: 1 ತಮ್ಮ ಕಛೇರಿಯ ಪತ್ರದ ಸಂಖ್ಯೆ: ಎಚ್.ಡಿ.ಎಂ.ಸಿ/20/10/ಸಿ.ಡಬ್ಲು-04/ಹೆಚ್.ಆರ್.ಸಿ/01/2019-20, ದಿನಾಂಕ: 29.02.2020.
2 ದೂರುದಾರರ ಅಭಿಪ್ರಾಯ ಪತ್ರದ ದಿನಾಂಕ: 09.06.2020.

*****

ಮೇಲ್ಕಂಡ ಪ್ರಕರಣವನ್ನು ದಿನಾಂಕ: 07.07.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:-

ಆದೇಶ

*"ಸುರೇಶ್ ನಾಗಪ್ಪ. ಬೆಳದಡಿ, ನಾಗಶೆಟ್ಟಿ ಕೊಪ್ಪ ಕೆರಿದಂಡೆ ಹತ್ತಿರ, ಹುಬ್ಬಳ್ಳಿ ಅವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ, ನಾನು ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲ್ಲೂಕು ನಾಗಶೆಟ್ಟಿಕೊಪ್ಪ (ಕೆರಿದಂಡೆ) ಕರ್ನಾಟಕ ಪ್ರದೇಶದ ಕೊಳಚೆ ಪ್ರದೇಶದ (ಅಭಿವೃದ್ಧಿ ಮತ್ತು ನಿರ್ಮೂಲನೆ ಕಾಯ್ದೆ) 1973 ರ ಅಧಿನಿಯಮ 3 ರಂತೆ ಆಧಿಸೂಚನೆ ಸಂಖ್ಯೆ: ಎಚ್.ಎಂ.ಎ: 84: ಎಮ್ಐ:75, ದಿನಾಂಕ: 16.10.1976 ರಂದು ಘೋಷಣೆ ಮಾಡಿ ಸದರಿ ಕೊಳಚೆ ಪ್ರದೇಶದಲ್ಲಿ ಪೂರ್ವ-ಪಶ್ಚಿಮ-ಉತ್ತರ-ದಕ್ಷಿಣ 23 ಫೂಟು ಅಳತೆ ಇರುವ ಆಸ್ತಿಯನ್ನು ಕರ್ನಾಟಕ ಸರ್ಕಾರ ಮಂಜೂರು ಮಾಡಿ ನನಗೆ ಹಕ್ಕು ಪತ್ರವನ್ನೂ ಸಹಾ ಪೂರೈಸಿದೆ. ಆದರೆ ಕೊಳಚೆ ನಿರ್ಮೂಲನಾ ಮಂಡಳಿಯವರು ಪೂರೈಸಿರುವ ಆಸ್ತಿಯು ಕಾಯ್ದೆ ಶೀರ ಮಾಲೀಕತ್ವದ ನನ್ನ ಆಸ್ತಿಯಾಗಿದ್ದರೂ ಕೂಡ, ಸದರಿ ಆಸ್ತಿ ಅತಿಕ್ರಮಣ ಅಂತಾ ಮಹಾನಗರ ಪಾಲಿಕೆಯವರು ಬೇಕಾಯ್ದೆಶೀರವಾಗಿ ದುರುದ್ದೇಶದಿಂದ ನನ್ನ ಕಟ್ಟಡವನ್ನು ಹಾಗೂ ಮನೆಯಲ್ಲಿ ಇರುವಂತಹ ಎಲ್ಲ ವಸ್ತುಗಳು ಸಹಿತ ನೆಲ ಸಮಗೊಳಿಸಿದ್ದು ಇರುತ್ತದೆ. ಆದರೆ ಇನ್ನುಳಿದ ನನ್ನ ಅಕ್ಕ ಪಕ್ಕದ ಆಸ್ತಿಯಲ್ಲಿರುವ ಮನೆಗಳೆಲ್ಲವೂ ಹಾಗೆ ಇದ್ದು ಕೇವಲ ನನ್ನ ಆಸ್ತಿಯಲ್ಲಿರುವ ಮನೆಯೊಂದನ್ನು ಮಾತ್ರ ಪಾಲಿಕೆಯ ಅಧಿಕಾರಿ ಸಿಬ್ಬಂದಿವರ್ಗದವರು ನೆಲಸಮ ಮಾಡಿರುವದು ನ್ಯಾಯ ಸಮ್ಮತವಾಗಿದೆಯೋ? ಇಂತಹ ಭ್ರಷ್ಟ ಅಧಿಕಾರಿಗಳ ಚಿತಾವಣೆಯಿಂದ ಹಾಗೂ ದುಷ್ಟ ರಾಜಕಾರಣಿಗಳ ಕುಮ್ಮಕ್ಕಿನಿಂದ ನನ್ನ ಆಸ್ತಿಯು ನಾಶವಾಗಿರುತ್ತದೆ.*

ಮಹಾನಗರ ಪಾಲಿಕೆಯ ವಲಯ ಕಛೇರಿ-6ರ ಅಧಿಕಾರಿಗಳು ಮತ್ತು ಚುನಾಯಿತಿ ಪ್ರತಿನಿಧಿಗಳ ಕುಮ್ಮಕ್ಕಿನಿಂದ ಕೇವಲ ನನ್ನ ಮೇಲೆ ಅತಿಕ್ರಮಣ ಮಾಡಿ ಕಟ್ಟಡ ಕಟ್ಟಿರುವದಾಗಿ ಘೋಷಣೆ ಮಾಡಿ ತೆರವು ಮಾಡಿರುವದು ಮತ್ತು ನೋಟೀಸು ನೀಡಿರುವದು ನನಗೆ ಮತ್ತು ನನ್ನ ಕುಟುಂಬಕ್ಕೆ ತುಂಬಲಾರದ ನಷ್ಟ ವ ಹಾನಿಯಾಗಿದ್ದರಿಂದ ಸದರಿ ಹಾನಿಯನ್ನು ಭರಪಾಯಿ ಮಾಡಿಕೊಡಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಅರ್ಜಿದಾರರಾದ ಶ್ರೀ ಸುರೇಶ ನಾಗಪ್ಪ ಬೆಳದೊಡಿ, ಸಾ॥ ನಾಗಶೆಟ್ಟಿಕೊಪ್ಪ, ಇವರಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಇವರು ನೀಡಿದ ಸ್ವಾಧೀನ ಪತ್ರದಲ್ಲಿ ನಾಗಶೆಟ್ಟಿಕೊಪ್ಪ (ಕೆರೆದಂಡೆ) ಕೊಳಚೆ ಪ್ರದೇಶದಲ್ಲಿ ಪೂರ್ವ-ಪಶ್ಚಿಮ-18ಅಡಿ, ಉತ್ತರ-ದಕ್ಷಿಣ-23ಅಡಿ, ಅಳತೆಯುಳ್ಳ ಹಾಗೂ ಈ ಕೆಳಕಾಣಿಸಿದ ಚೆಕ್‌ಬಂದಿಯಿಂದ ಸುತ್ತುವರೆದಿರುವ 154ನೇ ಸಂಖ್ಯೆ ನಿವೇಶನದಲ್ಲಿ ಸ್ವಾಧೀನದ ಪತ್ರ ನೀಡಿರುತ್ತಾರೆ.

ಚೆಕ್ ಬಂದಿ

ಅ) ಪೂರ್ವಕ್ಕೆ: ಖುಲ್ಲಾ ಜಾಗೆ

ಆ) ಪಶ್ಚಿಮಕ್ಕೆ: ಮನೆ ನಂ.160-ಜಗದೀಶ ಬಡಿಗೇರ ಮನೆ

ಇ) ಉತ್ತಕ್ಕೆ: ರಸ್ತೆ

ಈ) ದಕ್ಷಿಣಕ್ಕೆ: ಖುಲ್ಲಾ ಜಾಗೆ

ದೂರುದಾರರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ, ಹುಬ್ಬಳ್ಳಿ ಶಹರದ ವಾರ್ಡ್ ನಂ. 32ರ ಹನುಮಂತ ದೇವರ ಗುಡಿಯ ಹತ್ತಿರ, ಪ್ಲಾಟ್ ನಂ. 150 ರಲ್ಲಿ, 161.520 ಚದರ ಅಡಿಯಲ್ಲಿ, ಅನಧಿಕೃತವಾಗಿ ನಿರ್ಮಿಸಿರುವ ಭಾಗಶ: ಇಟ್ಟಿಗೆ ಹಾಗೂ ಭಾಗಶ: ಮೆಟಲ್ ಶೀಟನಿಂದ ಕೂಡಿದ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದರು. ಪಾಲಿಕೆಯಿಂದ ತೆರವುಗೊಳಿಸಲಾದ ಅನಧಿಕೃತ ಕಟ್ಟಡವು, ಪಾಲಿಕೆಯ ಮಾಲೀಕತ್ವದ ಜಾಗೆಯಲ್ಲಿದ್ದ ಕಟ್ಟಡವಾಗಿದ್ದು, ಅರ್ಜಿದಾರರು ಸಲ್ಲಿಸಿರುವ ಕೊಳಚೆ ನಿರ್ಮೂಲನ ಮಂಡಳಿಯಿಂದ ನೀಡಲಾಗಿರುವ ಹಕ್ಕು ಪತ್ರದ ಜಾಗೆಗೆ ಸಂಬಂಧಿಸಿದ್ದಿರುವುದಿಲ್ಲ. ಸದರಿಯವರಿಗೆ ದಿನಾಂಕ: 11.06.2019 ರಂದು ಕೆ.ಎಂ.ಸಿ ಕಾಯ್ದೆ 1976ರ ಕಲಂ 321(1) ಹಾಗೂ 321(2) ರನ್ವಯ ನೋಟೀಸ್ ನೀಡಲಾಗಿದ್ದು, ಸದರಿಯವರು ಸಮರ್ಪಕವಾದ ದಾಖಲಾತಿಗಳನ್ನು ನೀಡಲು ವಿಫಲರಾಗಿರುವುದರಿಂದ, ಪಾಲಿಕೆಯ ರಸ್ತೆಯಲ್ಲಿರುವ ಭಾಗಶ: ಇಟ್ಟಿಗೆ, ಭಾಗಶ: ಮೆಟಲ್‌ಶೀಟ್ ಹೊಂದಿರುವ ಅನಧಿಕೃತವಾಗಿ ನಿರ್ಮಿಸುತ್ತಿದ್ದ ಕಟ್ಟಡವನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 321(III) ರನ್ವಯ ಹೆಚ್.ಡಿ.ಎಂ.ಸಿ ವ.ಕ.ನಂ.06/2019-20, ದಿನಾಂಕ: 15.06.2019ರ ಆದೇಶದಂತೆ, ನೆಲಸಮಗೊಳಿಸಿರುವುದು ಕ್ರಮಬದ್ಧವಾಗಿರುತ್ತದೆ. ಕಾರಣ, ಈ ವಿಷಯದಲ್ಲಿ ಯಾವುದೇ ಮಾನವ ಹಕ್ಕು ಉಲ್ಲಂಘನೆಯಾಗಿರುವುದಿಲ್ಲವೆಂದು ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಅವರು ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಕೆಳಕಂಡಂತೆ ಅಭಿಪ್ರಾಯ ಸಲ್ಲಿಸಿದ್ದಾರೆ:-

ಹುಬ್ಬಳ್ಳಿ ತಾಲ್ಲೂಕು ನಾಗಶೆಟ್ಟಿಕೊಪ್ಪ ಗ್ರಾಮದಲ್ಲಿ ಕನಾಟಕ ಕೊಳಚೆ ನಿರ್ಮೂಲನಾ ಮಂಡಳಿಯವರು 2000ನೇ ಇಸ್ವಿಯಲ್ಲಿ ನಿವೇಶನ ರಹಿತರಿಗೆ ಸ್ವಾಧೀನ ಪತ್ರ ಕೊಡುವ ಮೂಲಕ ಪ್ಲಾಟ ನಂ. 154 ಇದರ ಅಳತೆ ಪೂರ್ವ-ಪಶ್ಚಿಮ 18 ಅಡಿ ಉತ್ತರ-ದಕ್ಷಿಣ 23 ಅಡಿ ಇರುವ ಖುಲ್ಲಾ ಪ್ಲಾಟ ಕೊಟ್ಟಿದ್ದು. ಕಳೆದ 20 ವರ್ಷಗಳಿಂದ ಅದೇ ಸ್ಥಳದಲ್ಲಿ ಮನೆಯನ್ನು ಕಟ್ಟಿಸಿಕೊಂಡು ನನ್ನ ಕುಟುಂಬದ ಸದಸ್ಯರೊಂದಿಗೆ ವಾಸ ಮಾಡುತ್ತಾ ಬಂದಿದ್ದು ಇರುತ್ತದೆ.

ಕಳೆದ 20 ವರ್ಷಗಳಿಂದ ಸದರಿ ಆಸ್ತಿಯ ಮೇಲೆ ಹುಬ್ಬಳ್ಳಿ ಧಾರವಾಡ ಮಹನಗರ ಪಾಲಿಕೆಗೆ ಆಸ್ತಿಕರ ತುಂಬುತ್ತಾ ಬಂದಿರುತ್ತೇನೆ. ಅದೇ ರೀತಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ನನ್ನ ಹೆಸರಿನಲ್ಲಿ ಆಸ್ತಿ ತೆರಿಗೆ ರಿಜಿಸ್ಟರಲ್ಲಿ ದಾಖಲು ಮಾಡಿ ಉತಾರ ಪೂರೈಸಿದ್ದು ಇರುತ್ತದೆ. ಅದರ ಪಿಐಡಿ ನಂ. 31/1684 ಇರುತ್ತದೆ.

*ಈ ಕುರಿತು ಅನೇಕ ಬಾರಿ ಹುಬ್ಬಳ್ಳಿ ಧಾರವಾಡ ಮಹನಗರ ಪಾಲಿಕೆಯವರಿಗೆ ವಿನಂತಿಸಿದ್ದರು ಸಹಿತಾ ರಾಜಕೀಯ ಚಿತಾವಣೆಯ ಮೇರೆಗೆ ಇನ್ನುಳಿದ ಮನೆಗಳನ್ನು ಬಿಟ್ಟು ಕೇವಲ ನನ್ನ ಮನೆಯನ್ನು ಮಾತ್ರ ನೆಲಸಮ ಮಾಡಿದ್ದು ಕಾನೂನು ಬಾಹಿರವಾಗಿದ್ದು, ಸದರಿ ಆಸ್ತಿಗೆ ವಾಸ ಮಾಡಲು ಹುಬ್ಬಳ್ಳಿ ಧಾರವಾಡ ಮಹನಗರ ಪಾಲಿಕೆ ಆಯುಕ್ತರಿಗೆ ನಿರ್ದೇಶನ ನೀಡಬೇಕೆಂದು ಕೋರಿದ್ದಾರೆ.*

*ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ದೂರುದಾರರಾದ ಶ್ರೀ ಸುರೇಶ್ ನಾಗಪ್ಪ ಬೆಳದೋಡಿ ಅವರಿಗೆ ನಿವೇಶನ ಸಂಖ್ಯೆ: 154 ಅನ್ನು ಮಂಜೂರು ಮಾಡಿದ್ದಾರೆ, ಆದರೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅವರು ವಾರ್ಡ್ ನಂ. 32 ರಲ್ಲಿ ಪ್ಲಾಟ್‌ನಂ. 150 ರಲ್ಲಿ 161.520 ಚ.ಅಡಿಯಲ್ಲಿ ಅನಧಿಕೃತವಾಗಿ ದೂರುದಾರರು ನಿರ್ಮಿಸಿದ್ದ ಕಟ್ಟಡವನ್ನು ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಅವರ ಆದೇಶ ಸಂಖ್ಯೆ: ಹೆಚ್.ಡಿ.ಎಂ.ಸಿ ವ.ಕ.ನಂ.06/2019-20, ದಿನಾಂಕ: 15.06.2019 ರಂದು ಆದೇಶ ಮಾಡಿದ್ದು ಅದರಂತೆ ಹುಬ್ಬಳ್ಳಿ ಶಹರದ ವಾರ್ಡ್ ನಂ. 32 ಹನುಮಂತ ದೇವರ ಗುಡಿಯ ಹತ್ತಿರ ಪ್ಲಾಟ್ ನಂ. 150 ರಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡವನ್ನು ಕೆ.ಎಂ.ಸಿ ಕಾಯ್ದೆ 1976 ಕಲಂ 321(III) ರ ಅನ್ವಯ ನೆಲಸಮ ಮಾಡಿರುವುದಾಗಿ ವರದಿ ಮಾಡಲಾಗಿದೆ. ಆದರೆ ದೂರುದಾರರು ಆಯೋಗಕ್ಕೆ ಸಲ್ಲಿಸಿರುವ ಅಭಿಪ್ರಾಯದಲ್ಲಿ ಪ್ಲಾಟ್ ನಂ.154 ರಲ್ಲಿಯ ಮನೆಯನ್ನು ನೆಲಸಮ ಮಾಡಿ, ತನ್ನ ಕುಟುಂಬವನ್ನು ಬೀದಿಪಾಲು ಮಾಡಿದ್ದಾರೆಂದು ತಿಳಿಸಿದ್ದಾರೆ. ಸದರಿ ಅಭಿಪ್ರಾಯದ ಪತ್ರದ ಪ್ರತಿ ಮತ್ತು ಅದರೊಂದಿಗಿನ ಲಗತ್ತುಗಳ ಪ್ರತಿಗಳನ್ನು ಲಗತ್ತಿಸಿ ಈ ಬಗ್ಗೆ ಪುನರ್ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ದೂರುದಾರರಿಗೆ ಸೂಕ್ತ ಮಾಹಿತಿ ನೀಡುವಂತೆ ಹಾಗೂ ಆಯೋಗಕ್ಕೆ ಅನುಸರಣಾ ವರದಿ ಸಲ್ಲಿಸುವಂತೆ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಅವರಿಗೆ ಆದೇಶಿಸಿ, ಆಯೋಗದಲ್ಲಿಯ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ."*

Sd/-
(ಆರ್.ಕೆ ದತ್ತ)
ಸದಸ್ಯರು

ಮೇಲ್ಕಂಡ ಆದೇಶದಂತೆ, ಉಲ್ಲೇಖ (2) ರ ಪತ್ರದ ಪ್ರತಿ ಮತ್ತು ಅದರೊಂದಿಗಿನ ಲಗತ್ತುಗಳ ಪ್ರತಿಗಳನ್ನು ಲಗತ್ತಿಸಿ ಕಳುಹಿಸಿ ಕೊಡುತ್ತಾ ಈ ಬಗ್ಗೆ ಪುನರ್ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಂಡ ಕೈಗೊಂಡ ಕ್ರಮದ ಬಗ್ಗೆ ದೂರುದಾರರಿಗೆ ಸೂಕ್ತ ಮಾಹಿತಿ ನೀಡುವಂತೆ ಹಾಗೂ ಆಯೋಗಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಹಾಗೂ ಪ್ರಕರಣವನ್ನು ಮುಕ್ತಾಯಗೊಳಸಲಾಗಿದೆ ಎಂದು ತಮಗೆ ಸೂಚಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

22/7/2020

ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಪ್ರತಿಯನ್ನು: ಶ್ರೀ ಸುರೇಶ್ ನಾಗಪ್ಪ ಬೆಳದಡಿ, ಸಾ: ನಾಗಶೇಟ್ಟಿಕೊಪ್ಪ ಕೆರಿದಂಡೆ ಹತ್ತಿರ, ಹುಬ್ಬಳ್ಳಿ: 580 023 – ರವರ ಮಾಹಿತಿಗಾಗಿ.

ಸೂಚನೆ. ದಯವಿಟ್ಟು ಇನ್ನೂ ಮುಂದೆ ಮಾಡುವ ಪತ್ರ ವ್ಯವಹಾರ/ವರದಿ/ಅಭಿಪ್ರಾಯ, ಇತ್ಯಾದಿಗಳಲ್ಲಿ ಹೆಚ್‌ಆರ್‌ಸಿ ಸಂಖ್ಯೆಯನ್ನು ನಮೂದಿಸುವುದು